www.prepp.in
Prepp
Your Personal Exams Guide

KVMS-U-KND

# ಕನ್ನಡ / KANNADA

## ಪತ್ರಿಕೆ I / Paper I

## (ಸಾಹಿತ್ಯ) / (LITERATURE)

ವೇಳೆ : ಮೂರು ಗಂಟೆ
Time Allowed : **Three Hours**

ಗರಿಷ್ಠ ಅಂಕಗಳು : 250
Maximum Marks : 250

---

### ಪ್ರಶ್ನೆ ಪತ್ರಿಕೆ ವಿಶೇಷ ಸೂಚನೆಗಳು

**ದಯವಿಟ್ಟು ಪ್ರಶ್ನೆಗಳಿಗೆ ಉತ್ತರಿಸುವ ಮೊದಲು ಕೆಳಗಿನ ಪ್ರತಿಯೊಂದು ಸೂಚನೆಗಳನ್ನು ಸರಿಯಾಗಿ ಓದಿರಿ :**

ಇದರಲ್ಲಿ **ಎಂಟು** ಪ್ರಶ್ನೆಗಳಿದ್ದು **ಎರಡು ಭಾಗಗಳಲ್ಲಿ** ವಿಂಗಡಿಸಲಾಗಿದೆ.

ಅಭ್ಯರ್ಥಿಗಳು ಎಲ್ಲಾ ಪ್ರಶ್ನೆಗಳಲ್ಲಿ **ಐದು** ಪ್ರಶ್ನೆಗಳಿಗೆ ಉತ್ತರಿಸಬೇಕು.

ಅಭ್ಯರ್ಥಿಗಳು ಪ್ರಶ್ನೆಗಳ ಸಂಖ್ಯೆ **1** ಮತ್ತು **5**ಕ್ಕೆ ಉತ್ತರಿಸುವುದು ಕಡ್ಡಾಯ, ಮತ್ತು ಇನ್ನುಳಿದ **ಮೂರು** ಪ್ರಶ್ನೆಗಳಲ್ಲಿ ಪ್ರತಿಯೊಂದು ವಿಭಾಗದಿಂದ ಕನಿಷ್ಠ **ಒಂದು** ಪ್ರಶ್ನೆಗಾದರೂ ಉತ್ತರಿಸಬೇಕು.

ಪ್ರತಿಯೊಂದು ಪ್ರಶ್ನೆ/ಭಾಗವು ಅಂಕಗಳನ್ನು ಆಯಾ ಪ್ರಶ್ನೆಗಳ ಮುಂದೆಯೇ ನಮೂದಿಸಲಾಗಿದೆ.

ಉತ್ತರಗಳನ್ನು ಅತ್ಯಗತ್ಯವಾಗಿ **ಕನ್ನಡದಲ್ಲೇ (ಕನ್ನಡ ಲಿಪಿಯಲ್ಲೇ)** ಬರೆಯಬೇಕು.

ಕೆಲವು ಪ್ರಶ್ನೆಗಳಿಗೆ ಉತ್ತರಿಸಲು ನಿರ್ದಿಷ್ಟಪಡಿಸಿದ ಶಬ್ದಗಳ ಮಿತಿಯನ್ನು ಸರಿಯಾಗಿ ಪಾಲಿಸಬೇಕು.

ಉತ್ತರಿಸಿದ ಪ್ರಶ್ನೆಗಳನ್ನು ಕ್ರಮಬದ್ಧವಾಗಿ ಪರಿಗಣಿಸಿ ಎಣಿಕೆ ಮಾಡಲಾಗುವುದು. ಅಪೂರ್ಣ ಉತ್ತರಗಳನ್ನು ಹೊಡೆದು ಹಾಕದಿದ್ದಲ್ಲಿ ಅವುಗಳನ್ನು ಎಣಿಕೆಯಲ್ಲಿ ಪರಿಗಣಿಸಲಾಗುತ್ತದೆ. ಪ್ರಶ್ನೋತ್ತರ ಸಹಿತವಾಗಿರುವ ಪುಸ್ತಿಕೆಯಲ್ಲಿ ಬರೆಯದೆ ಉಳಿದ ಪೂರ್ಣ ಖಾಲಿ ಪುಟಗಳನ್ನು ಮತ್ತು ಭಾಗಶಃ ಖಾಲಿ ಇರುವ ಪುಟಗಳನ್ನು ಸ್ಪಷ್ಟವಾಗಿ ಹೊಡೆದು ಹಾಕಬೇಕು.

### Question Paper Specific Instructions

***Please read each of the following instructions carefully before attempting questions :***

*There are **EIGHT** questions divided in **TWO SECTIONS**.*

*Candidate has to attempt **FIVE** questions in all.*

*Questions no. **1** and **5** are compulsory and out of the remaining, any **THREE** are to be attempted choosing at least **ONE** question from each section.*

*The number of marks carried by a question / part is indicated against it.*

*Answers must be written in **KANNADA (Kannada script)**.*

*Word limit in questions, wherever specified, should be adhered to.*

*Attempts of questions shall be counted in sequential order. Unless struck off, attempt of a question shall be counted even if attempted partly. Any page or portion of the page left blank in the Question-cum-Answer Booklet must be clearly struck off.*

---

www.prepp.in

Prepp
Your Personal Exams Guide

## SECTION A

**Q1.** ಕೆಳಗೆ ಕೊಟ್ಟಿರುವ ವಿಷಯಗಳನ್ನು ಕುರಿತು ಟಿಪ್ಪಣಿ ಬರೆಯಿರಿ. ಪ್ರತಿಯೊಂದು ಟಿಪ್ಪಣಿ 150 ಪದಗಳಿಗೆ ಮೀರದಂತೆ ಇರಬೇಕು. *10×5=50*

(a) ಕನ್ನಡದ ಯಾವುದಾದರೂ ಎರಡು ಪ್ರಾದೇಶಿಕ ಉಪಭಾಷೆಗಳನ್ನು ಪರಿಚಯಿಸಿ. *10*

(b) 'ವಿಕ್ರಮಾರ್ಜುನ ವಿಜಯಂ' ಕಾವ್ಯದ 'ದುಶ್ಶಾಸನ ವಧೆ' ಪ್ರಸಂಗದಲ್ಲಿ ಕಂಡು ಬರುವ ಹಿಂಸೆಯ ಅಭಿವ್ಯಕ್ತಿ. *10*

(c) 'ಶರಣಸತಿ - ಲಿಂಗಪತಿ' ಪರಿಕಲ್ಪನೆ ವಚನಗಳ ಸಂದರ್ಭದಲ್ಲಿ ಹೇಗೆ ವಿಶಿಷ್ಟ ? *10*

(d) ಭಕ್ತಿ ಮತ್ತು ದೇವರ ನಡುವಿನ ಸಂಬಂಧ ಕನಕದಾಸರ ಕೀರ್ತನೆಗಳಲ್ಲಿ ಹೇಗೆ ವ್ಯಕ್ತವಾಗಿದೆ ? *10*

(e) ನವ್ಯ ಸಾಹಿತ್ಯಕ್ಕೆ ದೊರೆತ ಪಶ್ಚಿಮದ ಪ್ರೇರಣೆಗಳು. *10*

**Q2.** ಕೆಳಗಿನ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ :

(a) ದಕ್ಷಿಣ ದ್ರಾವಿಡ ಭಾಷಾ ಕುಟುಂಬಕ್ಕೆ ಸೇರಿದ ಭಾಷೆಗಳ ಸಾದೃಶ್ಯವನ್ನು ವಿವರಿಸಿ. *20*

(b) ಪ್ರಗತಿಶೀಲ ಸಾಹಿತ್ಯಕ್ಕೂ ಮಾರ್ಕ್ಸ್‌ವಾದಕ್ಕೂ ಇರುವ ಸಂಬಂಧವನ್ನು ವಿವರಿಸಿ. *20*

(c) ನಾಗಚಂದ್ರ ಚಿತ್ರಿಸಿರುವ ಉದಾತ್ತ ರಾವಣನ ಪಾತ್ರ. *10*

**Q3.** ಕೆಳಗಿನ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ :

(a) ಜನ್ನನ 'ಯಶೋಧರ ಚರಿತೆ' ಯಲ್ಲಿ ನಿರೂಪಿತವಾಗಿರುವ ಕಾಮದ ಸ್ವರೂಪವನ್ನು ವಿಶ್ಲೇಷಿಸಿ. *20*

(b) ನವೋದಯ ಕನ್ನಡ ಸಾಹಿತ್ಯವು ಆಧುನಿಕತೆಗೆ ಮುಖಾಮುಖಿಯಾದ ಬಗೆಯನ್ನು ವಿಶ್ಲೇಷಿಸಿ. *20*

(c) 'ಪದ ಸ್ವೀಕರಣ' ಎಂದರೇನು ? ಉದಾಹರಣೆಗಳೊಂದಿಗೆ ವಿವರಿಸಿ. *10*

**Q4.** ಕೆಳಗಿನ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ :

(a) ಕನ್ನಡ ಭಾಷೆಯ ಹಳಮೆಯನ್ನು ನಿದರ್ಶನಗಳೊಂದಿಗೆ ಖಚಿತ ಪಡಿಸಿ. *20*

(b) ಕನ್ನಡ ದಲಿತ ಸಾಹಿತ್ಯದ ಮೇಲೆ ಗಾಂಧಿ - ಅಂಬೇಡ್ಕರ್ ಲೋಹಿಯಾ ಪ್ರಭಾವ ಬೀರಿದ ಬಗೆಯನ್ನು ವಿವರಿಸಿ. *20*

(c) ಕುಲದ ಹಿರಿಮೆ ನಿರಸನಗೊಂಡು ಸ್ಮಶಾನದಲ್ಲಿ ಸತ್ಯದರ್ಶನವಾದ ಘಟನೆಯ ಧ್ವನ್ಯರ್ಥವನ್ನು ವಿವರಿಸಿ. *10*

www.prepp.in

Prepp
Your Personal Exams Guide

## SECTION B

**Q5.** ಕೆಳಗೆ ಕೊಟ್ಟಿರುವ ವಿಷಯಗಳನ್ನು ಕುರಿತು ಟಿಪ್ಪಣಿ ಬರೆಯಿರಿ. ಪ್ರತಿಯೊಂದು ಟಿಪ್ಪಣಿ 150 ಪದಗಳಿಗೆ ಮೀರದಂತೆ ಇರಬೇಕು. *10×5=50*

(a) ಅಲಂಕಾರಗಳಲ್ಲಿ 'ರೀತಿ'ಯ ಮಹತ್ವ. *10*

(b) 'ಮಿಷೆಲ್ ಫುಕೋ'ನ ಡಿಸ್ಕೋರ್ಸ್ (Discourse) ಪರಿಕಲ್ಪನೆ. *10*

(c) ಹೊಯ್ಸಳರ ಕಾಲದ ವಾಸ್ತುಶಿಲ್ಪ. *10*

(d) ಭಾರತೀಯ ಸಂಗೀತಕ್ಕೆ ಕರ್ನಾಟಕದ ಕೊಡುಗೆ. *10*

(e) ಆಧುನಿಕ ಪೂರ್ವ ಕನ್ನಡ ಸಾಹಿತ್ಯದಲ್ಲಿ ಜೈನಧರ್ಮದ ಪ್ರತಿನಿಧೀಕರಣ. *10*

**Q6.** ಕೆಳಗಿನ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ :

(a) ಕಾವ್ಯ ಮೀಮಾಂಸೆಯಲ್ಲಿ ನಡೆದ 'ಸಹೃದಯ' ಮತ್ತು 'ಕಾವ್ಯ ಪ್ರಯೋಜನ'ದ ಕುರಿತ ಚರ್ಚೆಯನ್ನು ಸಂಗ್ರಹಿಸಿ ನಿರೂಪಿಸಿ. *20*

(b) ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ ಕಲ್ಯಾಣ ಚಾಲುಕ್ಯರ ಪಾತ್ರವೇನು ? ವಿಶ್ಲೇಷಿಸಿ. *20*

(c) ಕನ್ನಡದಲ್ಲಿ ಮಹಿಳಾವಾದ ಕಾಣಿಸಿಕೊಂಡ ಬಗೆಯನ್ನು ಐತಿಹಾಸಿಕವಾಗಿ ನಿರೂಪಿಸಿ. *10*

**Q7.** ಕೆಳಗಿನ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ :

(a) ವಸಾಹತೋತ್ತರ ವಿಮರ್ಶೆಯಲ್ಲಿ ಎಡ್ವರ್ಡ್ ಸಯೀದ್‌ನ 'ಓರಿಯೆಂಟಲಿಸಂ' (Orientalism) ಬೀರಿದ ಪ್ರಭಾವವನ್ನು ವಿಶ್ಲೇಷಿಸಿ. *20*

(b) ವಿಜಯನಗರ ಸಾಮ್ರಾಜ್ಯ ಹುಟ್ಟಿಹೊಂಡ ಸಂಕೀರ್ಣ ರಾಜಕೀಯ ವಿದ್ಯಮಾನದ ಕುರಿತು ವಿವರಿಸಿ. *20*

(c) ಕರ್ನಾಟಕದ ಚಿತ್ರಕಲೆಗೆ ಮೈಸೂರು ಅರಸರ ಕಾಲದ ಕೊಡುಗೆ. *10*

**Q8.** ಕೆಳಗಿನ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ :

(a) ಮಾರ್ಕ್ಸ್‌ವಾದಿ ಸಾಹಿತ್ಯ ವಿಮರ್ಶೆಯ ಸ್ವರೂಪ ಮತ್ತು ಲಕ್ಷಣಗಳನ್ನು ವಿವರಿಸಿ. *20*

(b) ಕರ್ನಾಟಕದ ವಾಸ್ತುಶಿಲ್ಪದ ಮೇಲೆ ಇಸ್ಲಾಂ ಧರ್ಮದ ಪ್ರಭಾವವನ್ನು ವಿವರಿಸಿ. *20*

(c) 'ಶಾಂತರಸ'ದ ಅನನ್ಯತೆಯನ್ನು ಪರಿಚಯಿಸಿ. *10*